# ನಕ್ಕಾಗ ಎಲ್ಲರ ಹಲ್ಲೂ ಬೆಳ್ಳಗೆ

ನಕ್ಕಾಗ ಎಲ್ಲರ ಹಲ್ಲೂ ಬೆಳ್ಳಗೆ ಕಾಣುತ್ತವೆ. ಎಲ್ಲರ ಕಣ್ಣುಗಳು ಬಿಳುಪಾಗಿಯೇ ಹೊಳೆಯುತ್ತವೆ. ಎಲ್ಲರ ನಾಲಗೆಯ ಬಣ್ಣ ಒಂದೇ ಆಗಿರುತ್ತದೆ. ಎಲ್ಲರ ರಕ್ತವು ಕೆಂಪಗೇ ಇರುತ್ತದೆ. ಈ ಸಾರ್ವತ್ರಿಕ ಸತ್ಯವನ್ನು ಅರ್ಥ ಮಾಡಿಕೊಂಡು ಬಿಟ್ಟರೆ ಜಗತ್ತಿನಲ್ಲಿ ಯಾರೂ ವರ್ಣಬೇಧ ನೀತಿಯನ್ನು ಅನುಸರಿಸಲಾರರು. ಜಗತ್ತಿನ ಮೂರು ಮುಖ್ಯ ಜನಾಂಗಗಳನ್ನು ಅವರ ಚರ್ಮದ ಬಣ್ಣ, ಮುಖ ಚಹರೆ, ಕೂದಲಿನ ಆಧಾರದ ಮೇಲೆ ಗುರುತಿಸುತ್ತಾರೆ. ಹಾಗೆ ನೋಡಿದರೆ ಜಗತ್ತಿನ ಆದಿ ಮಾನವನ ವರ್ಣ ಕಪ್ಪಗೆ ಅಥವಾ ಕಡು ತಾಮ್ರವರ್ಣದ್ದಾಗಿತ್ತೆಂದು ಮಾನವ ಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ. ಈ ಕಪ್ಪು ಅಥವಾ ಕಡು ತಾಮ್ರದ ಜನರು ನಾನಾ ಕಾರಣಗಳಿಂದ ಜಗತ್ತಿನ ಬೇರೆ ಬೇರೆ ಹವಾಮಾನ ಪ್ರದೇಶಗಳಿಗೆ ವಲಸೆ ಹೋದಾಗ ಅವರ ಚರ್ಮದ ಮೆಲನಿನ್ ಅಂಶವು ಕಡಿಮೆಯಾಗುತ್ತಾ ಬಂದು ಲಕ್ಷಾಂತರ ವರ್ಷಗಳ ಅವಧಿಯಲ್ಲಿ ಬಿಳಿಯ ವರ್ಣಕ್ಕೆ ತಿರುಗಿತೆಂದು ವಿಜ್ಞಾನ ಸಕಾರಣವಾಗಿ ಗುರುತಿಸುತ್ತದೆ. ಹೀಗಾಗಿ ತಾವು ಅತ್ಯಂತ ಶ್ರೇಷ್ಠ ವರ್ಣದವರೆಂದು ಬೀಗುವ ಶ್ವೇತ ವರ್ಣೀಯರು ಒಂದಾನೊಂದು ಕಾಲದ ಕಪ್ಪು ವರ್ಣೀಯರ ಸಂತಾನವೇ ಎಂಬುದನ್ನು ಮರೆಯಬಾರದು.

ಭಾರತದ ಆದಿವಾಸಿಗಳು ಕಪ್ಪು ವರ್ಣೀಯರೇ ಆಗಿದ್ದರು. ಮಧ್ಯ ಏಷ್ಯಾದಿಂದ ವಲಸೆ ಬಂದ ಆರ್ಯರು ಬಿಳಿಯರಾಗಿದ್ದರು. ಇವರಿಬ್ಬರ ನಡುವೆ ನಿರಂತರವಾಗಿ ಶತ ಶತಮಾನಗಳ ನಡುವೆ ನಡೆದ ವರ್ಣ ಸಂಕರದ ಕಾರಣದಿಂದಾಗಿ– ಜಗತ್ತಿನ ಮೂರು ಮುಖ್ಯ ಜನಾಂಗಗಳ ಯಾವ ಲಕ್ಷಣವೂ ಹೋಲದ ಅಥವಾ ಎಲ್ಲ ಲಕ್ಷಣಗಳ ಸಂಮಿಶ್ರದ ನವೀನ ತಳಿಯೊಂದು ಭಾರತದಲ್ಲಿ ಸೃಷ್ಟಿಯಾಯಿತು. ಭಾರತದ ಉತ್ತರ ಮತ್ತು ಈಶಾನ್ಯ ತುದಿಯಲ್ಲಿ ಚೈನಾ ಮತ್ತು ಜಪಾನ್ ಮತ್ತಿತರ ದೇಶಗಳ ಜನಾಂಗೀಯ ಲಕ್ಷಣವೂ ಕೂಡ ಭಾರತೀಯರ ಮೇಲೆ ಆಗಿರುವುದನ್ನು ಅಲ್ಲಗೆಳೆಯಲಾಗುವುದಿಲ್ಲ. ಜಗತ್ತಿನ ಎಲ್ಲಾ ಸಮ್ಮಿಶ್ರ ಜನಾಂಗೀಯ ಭೌತಿಕ ಚಹರೆ ಲಕ್ಷಣಗಳನ್ನೊಳಗೊಂಡಿರುವ ಈ ದೇಶವು ನಿಜವಾದ ಅರ್ಥದಲ್ಲಿ ಬೌದ್ಧಿಕ ಹೆಚ್ಚುಗಾರಿಕೆಯನ್ನು ಗಳಿಸಲು ಸಾಧ್ಯವಾಯಿತು. ಏಕೆಂದರೆ ಸಸ್ಯವಾಗಲಿ ಪ್ರಾಣಿಗಳಾಗಲಿ ಸದಾ ಕಸಿಗೊಳ್ಳುತ್ತಾ ಸಾಗಿದಾಗ ಮಾತ್ರ ಹೊಸ ಬಗೆಯ, ನಾನಾ ನಮೂನೆಯ ಸೃಷ್ಟಿ ಸಾಧ್ಯ. ಜಗತ್ತಿನ ಎಲ್ಲ ಜನಾಂಗಗಳ ಬೌದ್ಧಿಕ ಕಸುವನ್ನು ಜೀರ್ಣಿಸಿಕೊಂಡಿರುವ ಭಾರತೀಯರು ಶ್ರೇಷ್ಠ ವಿಜ್ಞಾನಿಗಳೂ, ವೈದ್ಯರೂ, ವಾಸ್ತುಶಿಲ್ಪ ತಜ್ಞರು, ಆಡಳಿತ ನಿರ್ವಾಹಕರೂ ಆಗಿ ವಿಕಾಸಗೊಳ್ಳಲು ಸಾಧ್ಯವಾಯಿತು. ಆದರೆ ಆಶ್ಚರ್ಯವೂ ದುರಂತವೂ ವಿಚಿತ್ರವೂ ಆದ ಸತ್ಯವೊಂದು ಇಲ್ಲೇ ಬಿಚ್ಚಿಕೊಳ್ಳುತ್ತದೆ. ಎಲ್ಲ ಜನಾಂಗಗಳ ದೈಹಿಕ –ಮಾನಸಿಕ ವಂಶವಾಹಿನಿಗಳನ್ನು ತಲೆ ತಲೆಮಾರುಗಳ ಅಂತರದಲ್ಲಿ ತನ್ನದಾಗಿಸಿಕೊಂಡು ಜೀರ್ಣಿಸಿಕೊಂಡಿರುವ ಭಾರತೀಯರು ದೈಹಿಕವಾಗಿ ಬೇರೆ ಜನಾಂಗಗಳಷ್ಟು ದೇಹದಾರ್ಢ್ಯ ಶಕ್ತತೆಯನ್ನು ಮೆರೆಯಲು ವಿಫಲವಾಗಿರುವುದು ಸತ್ಯ. ಆ ಎಲ್ಲಾ ಜನಾಂಗಗಳಿಗಿಂತ ದೈಹಿಕವಾಗಿಯೂ ಬಲಾಢ್ಯಗೊಳ್ಳಬೇಕಾದದ್ದು ನೀರಿಕ್ಷಿತ ಆಶಯ. ಆದರೆ ಆಟೋಟಗಳಲ್ಲಿ, ದೈಹಿಕ ಶಕ್ತಿ ಬಯಸುವ ಕ್ರೀಡೆಗಳಲ್ಲಿ ಭಾರತೀಯರು ತೀರ ಹಿಂದೆ ಬಿದ್ದಿರುವುದು ಆಶ್ಚರ್ಯವಾದರೂ ಸತ್ಯ ಸಂಗತಿಯಾಗಿದೆ.

ಭಾರತೀಯರು ಜಗತ್ತಿನ ಬಿಳಿಯ ಜನಾಂಗಕ್ಕೆ ಹೋಲಿಸಿದರೆ ವರ್ಣ ತಾರತಮ್ಯ ಮಾಡುವುದು, ವರ್ಣದ ಕಾರಣದಿಂದ ಕೀಳಾಗಿ ಭಾವಿಸುವುದು, ಅವಮಾನಿಸಿವುದು ಕಡಿಮೆ. ಇದಕ್ಕೆ ಮೂಲ ಕಾರಣ ಭಾರತೀಯರು ಸಾವಿರಾರು ವರ್ಷಗಳ ಅಂತರದಲ್ಲಿ ನಡೆಸಿಕೊಂಡು ಬಂದಿರುವ ವರ್ಣ ಸಂಕರವೇ ಆಗಿದೆ. ಹೀಗಾಗಿ ಭಾರತದ ಗಂಡು ಹೆಣ್ಣುಗಳು ತಾವು ಮದುವೆಯಾಗುವಾಗ ಸಂಗಾತಿಗಳ ಬಣ್ಣವನ್ನು ಆದ್ಯತೆಯ ಮೇರೆಗೆ ಮಾಪನ ಮಾಡುವುದಿಲ್ಲ. ಆದರೆ ಕಳೆದ ಶತಮಾನದಿಂದೀಚೆಗೆ ಪಾಶ್ಚಾತ್ಯರ ಪ್ರಭಾವದಿಂದಾಗಿ ಕರಿಯ ಬಿಳಿಯ ಎಂಬ ತೆಳುವಾದ ತಾರತಮ್ಯ ಭಾವ ಮೂಡಿರುವುದು ಸುಳ್ಳಲ್ಲ.

ಭಾರತದ ಮೂಲ ಆತ್ಮದ ಪ್ರೀತಿ ಕಪ್ಪು ವರ್ಣದ ಮೇಲೆ ಇದೆ ಎಂದರೆ ತಪ್ಪಾಗಲಾರದು. ಭಾರತೀಯರ ಕಪ್ಪು ವರ್ಣದ ಪ್ರೀತಿಯ ಸಂಕೇತಗಳಾಗಿ ಈ ದೇಶದ ಇಬ್ಬರು ಮಹಾನ್ ದೇವತೆಗಳಾದ 'ಕೃಷ್ಣ' ಮತ್ತು 'ಶಿವ' ಕಾಣಿಸಿಕೊಳ್ಳುತ್ತಾರೆ. ಅವರಿಬ್ಬರೂ ಕರಿಯರೇ, ನೀಲಮೇಘ ಶ್ಯಾಮರೇ! ಈ ಕಡು ಕಪ್ಪು ವರ್ಣದ ಮಂಗಳ ಮೂರ್ತಿಗಳನ್ನು ಅವರು ಆರಾಧಿಸುತ್ತಿರುವ ಪರಿಯೇ ಬಿಳಿಯ ಜನಾಂಗಕ್ಕೆ ಉದಾತ್ತ ಮಾರ್ಗದರ್ಶಕ ಬೆಳಕಾಗಿ ತೋರಬಾರದೆ?

■ **ಶಿಕಾಕು**

## ಮಾತೇ ಮುತ್ತು

★ ನಿನ್ನ ಹೊಟ್ಟೆಗೆ ಬೇಕಾದ್ದಷ್ಟಕ್ಕೆ ಮಾತ್ರ ನೀನು ಅಧಿಕಾರಿ, ಅದಕ್ಕಿಂತ ಹೆಚ್ಚು ಸಂಗ್ರಹಿಸಿದರೆ ನೀನೊಬ್ಬ ಕಳ್ಳ.

–ಭಗವದ್ಗೀತೆ

★ ಪ್ರಜ್ಞಾಶಕ್ತಿಯಿಂದ ಮಾನಸ ದುಃಖವನ್ನೂ, ಔಷಧಗಳಿಂದ ಶರೀರ ದುಃಖವನ್ನೂ ಹೋಗಲಾಡಿಸಿಕೊಳ್ಳಬೇಕು. ಜ್ಞಾನದ ಸಾಮರ್ಥ್ಯವೆಂದರೇ ಅದೇ ಆಗಿದೆ. ಅದನ್ನು ಬಿಟ್ಟು ಮಕ್ಕಳಂತೆ ಇರಬಾರದು.

–ಮಹಾಭಾರತ

★ ಯಾವ ಉದ್ದಾಮ ಪಾಂಡಿತ್ಯದಿಂದ ದುರ್ಜನರು ಗರ್ವದಿಂದ ಮೆರೆಯುತ್ತಾರೋ, ಅದೇ ಪಾಂಡಿತ್ಯದಿಂದ ಸಜ್ಜನರು ಸ್ಥಿರವೂ, ಶ್ರೇಷ್ಠವೂ ಆದ ಶಾಂತಿಯನ್ನು ಪಡೆಯುತ್ತಾರೆ.

–ರಸ ಗಂಗಾಧರ

★ ಬಹುಬೇಗ ಮೇಲೆ ಬರಲು ಮನುಷ್ಯ ಸದಾ ಯೋಚಿಸುತ್ತಾನೆ. ಧೂಳು, ಬೂಸಾ ಮತ್ತು ಪುಕ್ಕ– ಇವು ಬಹಳ ವೇಗದಲ್ಲಿ ಮೇಲೆ ಬರುತ್ತವಲ್ಲವೇ

–ಹೇಯರ್

★ ಎಷ್ಟು ತಿಳಿದಿದೆಯೋ ಅದಕ್ಕಿಂತ ಕಡಿಮೆ ಮಾತನಾಡುವುದು ಕ್ಷೇಮ.

–ಶೇಕ್ಸ್‌ಪಿಯರ್

★ ಸಮಯಸಾದಕರು ಅಪಾಯಕಾರಿ ವ್ಯಕ್ತಿಗಳನ್ನು ಓಲೈಸುತ್ತಾರೆ, ಸಭ್ಯರನ್ನು ತುಳಿಯುವ ಪ್ರಯತ್ನ ಮಾಡುತ್ತಾರೆ. ಆದರೆ ಈ ನಿಲುವು ತಮಗೇ ಮುಳುವಾಗುತ್ತದೆ ಎಂದು ಸಮಯಸಾದಕರು ತಿಳಿಯುವ ಹೊತ್ತಿಗೆ ಕಾಲ ಮಿಂಚಿ ಹೋಗಿರುತ್ತದೆ.

–ಅನುಭವಾಮೃತ

★ ಸುಖ ಮತ್ತು ಆನಂದ ಪನ್ನೀರಿನಂತೆ. ಅದನ್ನು ಎಲ್ಲಿಯೇ ಸಿಂಪಡಿಸಲಿ, ಅಲ್ಲಿ ಸುಗಂಧ ಹರಡುತ್ತದೆ.

–ಎಮರ್ಸನ್

★ ಬೇರೆಯವರು ನೀವು ಆಡಿದ ಮಾತನ್ನು ಮರೆಯಬಹುದು. ಆದರೆ ನೀವು ಅವರನ್ನು ನಡೆಸಿಕೊಂಡ ರೀತಿಯನ್ನು ಮರೆಯುವುದಿಲ್ಲ.

–ತ.ರಾ.ಸು.

★ ಅಳಿಸಿಕೊಳ್ಳುವ ಯೋಗಕ್ಕಿಂತ, ತನ್ನನ್ನು ಅಳಿಸಿ ಹಾಕದೆ ಕೂಡುವ ಯೋಗವೇ ಮೇಲು.

–ಅಲ್ಲಮ ಪ್ರಭು

★ ಯುಕ್ತವಾದ ಮಾತುಗಳನ್ನು ಮಕ್ಕಳೇ ಆಡಿದ್ದರೂ, ಬುದ್ಧಿವಂತರು ಅದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಸೂರ್ಯನಿಗೆ ಅವಕಾಶ ಇಲ್ಲದ ಕಡೆ ದೀಪದ ಬೆಳಕು ಹರಡುವುದಿಲ್ಲವೇನು?

–ಹಿತೋಪದೇಶ

★ ಮಾತಿಗಿಂತ ನಮ್ಮ ಜೀವನವನ್ನು ಮಾತನಾಡಲು ಬಿಡುವುದು ಉತ್ತಮ.

–ಮಹಾತ್ಮ ಗಾಂಧೀಜಿ

★ ತಾಮಸದಿಂದಾಗುವ ತೀರ್ಪುಗಳು ನಿರಾಕರಿಸಲ್ಪಡುವ ತೀರ್ಪಿಗೆ ಸಮವಾಗಿರುತ್ತವೆ.

–ಕಾರ್ಲ್‌ಮಾರ್ಕ್ಸ್

★ ಕಷ್ಟಗಳು ಮನುಷ್ಯನನ್ನಾಗಿಸುತ್ತದೆ, ಸಂಪತ್ತು ದಾನವನನ್ನಾಗಿಸುತ್ತದೆ.

–ವಿಕ್ಟರ್ ಹ್ಯೂಗೋ